

# ಥ್ರಿಲ್ಲರ್ ಹಳಿಯ ಮೇಲೆ ತಲ್ಲಣದ ಪಯಣ

**ಮನುಷ್ಯನ ಮನಸ್ಸಿನಲ್ಲಿ ಹಿಂಸೆ ಹುಟ್ಟಿಕೊಳ್ಳುವುದು ಹೇಗೆ? ಅದು ತನ್ನಷ್ಟಕ್ಕೆ ಇರುವುದೇ, ಸುತ್ತಲಿನ ಸಮಾಜದಿಂದ ಬೆಳೆಯುವುದೇ? ಎಂಬುದರ ಶೋಧನೆಯನ್ನು ಸಿನಿಮಾ ಮಾಧ್ಯಮದ ಕಲೆಗಾರಿಕೆಯ ಬಲದಿಂದಲೇ ನಿರ್ವಹಿಸುವ ಕಾರಣಕ್ಕೆ 'ವಾಂಡಾ' ಅಧ್ಯಯನಯೋಗ್ಯ ಕಿರುಚಿತ್ರ.**

■ **ಗೌರಿ**



**ಹೆಸರು:** ವಾಂಡಾ (ಕೆನಡಾ)
**ನಿರ್ದೇಶಕ:** ಬೆಂಜಮಿನ್ ನಿಕೋಲಸ್
**ನಿರ್ಮಾಣ:** ಇನ್ನಾ ಪಾನ್
**ಛಾಯಾಗ್ರಹಣ:** ಕ್ರಿಸ್ಟೋಫ್ ಬ್ರಾಂಡ್
**ತಾರಾಗಣ:** ಲಿಲಿ ರೋಸ್ ಸ್ಟೆ ಮ್ಯಾರಿ, ವೆರೊನಿಕ್ ಬ್ಯೂಡೆಟ್, ಫ್ರಾನ್ಸಿಸ್ ಕಾರ್ಡಿನ್

ಅದು ಹದಗೆಟ್ಟ ಕುಟುಂಬ. ತಂದೆ ಹಿಂಸಾಪ್ರೇಮಿ, ತಾಯಿ ಯಾವತ್ತಿಗೂ ಮದ್ಯದ ಅಮಲಿನಲ್ಲೇ ಮುಳುಗಿರುವವಳು. ಹಿಂಸೆಯೇ ಮೈತುಂಬಿಕೊಂಡ ಈ ಮನೆಯಲ್ಲಿ, ಮುಳ್ಳುಕಂಟಿಯ ಮೇಲೆ ಅರಳಲೋ ಬೇಡವೋ ಎಂಬ ಆತಂಕದಲ್ಲೇ ನಡುಗುತ್ತಿರುವ ಮೊಗ್ಗಿನ ಹಾಗೆ ಹನ್ನೆರಡರ ಆ ಪುಟ್ಟ ಹುಡುಗಿ ವಾಂಡಾ. ಯಾವಾಗ ನೋಡಿದರೂ ಪ್ರಕ್ಷುಬ್ಧತೆಯೇ ತಾಂಡವವಾಡುತ್ತಿರುವ ಪರಿಸರದಲ್ಲಿ ಅವಳಿಗೆ ಪುಸ್ತಕವೇ ಪ್ರಪಂಚ. ಮಡಿಲಲ್ಲಿ ಮಲಗುವ ನೆಚ್ಚಿನ ನಾಯಿ ಪರ್ಲಿನ್ ಒಂದೇ ಆಪ್ತಸಂಗಾತಿ.

ಹಿಂದಿನ ರಾತ್ರಿ ಅಮ್ಮನ ಗಲಾಟೆ ಕೇಳಿ ರೋಸಿ ಮಲಗಿದ ವಾಂಡಾ, ಬೆಳಿಗ್ಗೆ ಎದ್ದಾಗ ಋತುಸ್ರಾವವಾಗಿರುತ್ತದೆ. ಮುಖದಲ್ಲಿ ಭೀತಿ; ಆದರೆ ಸಂತೈಸುವ ಕೈಗಳು, ಸಮಾಧಾನದ ಮಾತುಗಳು ಅಲ್ಲಿಲ್ಲ. ಅವಳೇ ಎದ್ದು ಸಂಭಾಳಿಸಿಕೊಂಡು ರೆಡಿಯಾಗಿ ಹೊರಬಂದರೆ ಅಲ್ಲಿ ಮತ್ತೊಂದು ಆಘಾತ ಅವಳಿಗೆ ಕಾದಿದೆ. ಅವಳ ನೆಚ್ಚಿನ ಪರ್ಲಿನ್ ಸತ್ತು ಮಲಗಿದೆ. ಕ್ಷಣಕ್ಷಣಕ್ಕೂ ಹಿಂಸೆಯನ್ನು ಉಣಿಸುವ ಜಗತ್ತಿನಲ್ಲಿ ಇದ್ದ ಆತ್ಮೀಯಭಾವದ ಒಂದೇ ಸೆಲೆ ಬತ್ತಿಹೋಗಿದೆ. ಆ ಪುಟಾಣಿ ವಾಂಡಾಳ ಮನಸ್ಸಿನಲ್ಲಿ ಎದ್ದ ಬಿರುಗಾಳಿ ಎಂಥದಿರಬಹುದು? ಅದು ಹೇಗೆಲ್ಲ ವ್ಯಕ್ತಗೊಳ್ಳಬಹುದು? ಬದುಕಿನ ಬರ್ಬರ ಅನುಭವ ಆ ಮುಗ್ಧ ಮನಸ್ಸಿನ ಒಳಗಿನ ಮನುಷ್ಯತ್ವದ ಸೆಲೆಯನ್ನು ಇಂಗಿಸಿದರೆ ಅದರ ಪರಿಣಾಮ ಹೇಗಿರಬಹುದು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನವಾಗಿಯೇ 'ವಾಂಡಾ' ಕಿರುಚಿತ್ರ ರೂಪುಗೊಂಡಿದೆ.

ಸೈಕಾಲಾಜಿಕಲ್ ಥ್ರಿಲ್ಲರ್ ಎಂದು ಹೇಳಬಹುದಾದ ಈ ಕಿರುಚಿತ್ರ ಆ ಕ್ಷಣದ ಥ್ರಿಲ್‌ನ ಆಚೆಗೂ ತಲ್ಲಣ ಹುಟ್ಟಿಸುವ ಶಕ್ತಿ ಹೊಂದಿದೆ. ಪುಟಾಣಿ ಮನಸ್ಸಿನಲ್ಲಿ ಭುಗಿಲೇಳುವ ಕ್ರೌರ್ಯ ವ್ಯಕ್ತವಾಗುವ ಬಗೆ ಬೆಚ್ಚಿಬೀಳಿಸುವ ಹಾಗಿದೆ. ನಿರ್ದೇಶಕರು ಅದನ್ನು ವಾಚ್ಯವಾಗಿಸದೆ ನರದೊಳಗೆ ಹರಿಯುವ ರಕ್ತದ ಹಾಗೆ ತಣ್ಣಗೆ ಬಿಂಬಿಸಿರುವುದು ಪರಿಣಾಮವನ್ನು ಇನ್ನಷ್ಟು ಹೆಚ್ಚಿಸಿದೆ. ಸುರಂಗದೊಳಗೆ ಬಿದ್ದು ಕತ್ತು ಮುರಿದುಕೊಂಡ ಹೆಂಗಸಿನ ಉಸಿರ ಧ್ವನಿ ಹುಟ್ಟಿಸುವ ತಲ್ಲಣ ಬಹುಶಃ ಯಾವ ಹಿನ್ನೆಲೆ ಸಂಗೀತದಿಂದಲೂ ಉಂಟುಮಾಡಲು ಸಾಧ್ಯವಾಗುತ್ತಿರಲಿಲ್ಲ.

ಉದ್ದ ತಲೆಗೂದಲನ್ನು ಎರಡು ಮೂರು ಎಳೆಗಳನ್ನಾಗಿಸಿಕೊಂಡು ಬಿಗಿಯಾಗಿ ಜಡೆ ಹೆಣೆದ ರೀತಿಯಲ್ಲಿ ಇರುವ ನಿರೂಪಣೆಯ ಮೂಲಕವೇ ನಿರ್ದೇಶಕರು ಹಲವು ಸಂಗತಿಗಳನ್ನು ದಾಟಿಸುತ್ತ ಹೋಗುತ್ತಾರೆ.

ಇಡೀ ಕಿರುಚಿತ್ರದ ಭಿತ್ತಿಯನ್ನು ರೂಪಿಸುವ ಮುಖ್ಯ ಎರಡು ಪಾತ್ರಗಳು ತೆರೆಯ ಮೇಲೆ ಕಾಣಿಸಿಕೊಳ್ಳುವುದೇ ಇಲ್ಲ. ಒಂದು ವಾಂಡಾಳ ತಂದೆ. ಎರಡನೇ ಪಾತ್ರ ವಾಂಡಾಳನ್ನು ವಿಚಾರಿಸುತ್ತಿರುವ ಪೊಲೀಸ್ ಅಧಿಕಾರಿ. ಕಿರುಚಿತ್ರ ಆರಂಭವಾಗುವುದೂ ಪೊಲೀಸ್ ಅಧಿಕಾರಿ ವಾಂಡಾಳ ವಿಚಾರಣೆ ಆರಂಭಿಸುವುದರೊಂದಿಗೆ. ಆ ವಿಚಾರಣೆಯ ಸಂಭಾಷಣೆಗಳು ಹಿನ್ನೆಲೆಯಲ್ಲಿ ಬರುತ್ತ ಹೋಗುತ್ತವೆ. ಅದಕ್ಕೆ ಪರ್ಯಾಯವಾಗಿ ಆ ಹುಡುಗಿ ಹೇಳುವ ವಿವರಗಳಿಗೆ ಸಮಾನಾಂತರವಾದ ಕಥನ ತೆರೆಯ ಮೇಲೆ ಮೂಡುತ್ತ ಹೋಗುತ್ತದೆ. ಈ ಎರಡು ಬಗೆಯ ನಿರೂಪಣೆಯಲ್ಲಿಯೇ ವ್ಯತ್ಯಾಸವಿದೆ. ವಾಂಡಾ ಪೊಲೀಸ್ ಅಧಿಕಾರಿಗೆ ಪೂರ್ಣ ಸತ್ಯ ಹೇಳುತ್ತಿಲ್ಲ ಎನ್ನುವುದು ಸ್ವಲ್ಪೇ ಹೊತ್ತಿನಲ್ಲಿ ಗೊತ್ತಾಗುತ್ತದೆ. ಅವಳು ಹೇಳುತ್ತಿರುವುದೊಂದು ತೆರೆಯ ಮೇಲೆ ಕಾಣುತ್ತಿರುವುದು ಇನ್ನೊಂದು. ಆದರೆ ಅವುಗಳಲ್ಲಿ ಯಾವುದು ಸತ್ಯ? ತೆರೆಯ ಮೇಲೆ ಕಾಣಿಸುತ್ತಿರುವುದೇ ಸುಳ್ಳಾಗಿ ವಾಂಡಾ ಮಾತೇ ಸತ್ಯವಾಗಿದ್ದರೆ? ಈ ಸಾಧ್ಯತೆಯೊಟ್ಟಿಗೇ ಕಥೆ ಸಾಗುತ್ತದೆ. ಸತ್ತ ತನ್ನ ನೆಚ್ಚಿನ ನಾಯಿಯನ್ನು ಬೆನ್ನ ಮೇಲೆ ಹೊತ್ತು ಮನೆಬಿಡುವ ವಾಂಡಾ, ನಮ್ಮನ್ನು ನಡುಗಿಸುತ್ತಲೇ ಸಾಗುತ್ತಾಳೆ. ಕೇಳುವುದರ ಮತ್ತು ಕಾಣುವುದರ ನಡುವಿನ ಬಿರುಕನ್ನು ಮನಸಲ್ಲಿ ಉಳಿಸಿಯೇ ಕಿರುಚಿತ್ರ ಕೊನೆಗೊಳ್ಳುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ **bit.ly/39xFIqE** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.